ನಂ 5126

ದಿನಾಂಕ 28/3/09

ಕರ್ನಾಟಕ ಸರ್ಕಾರ

ಸಂಖ್ಯೆ: ಲೋಇ 47 ಬಿಎಂಪಿಸ್ 2009

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:19.3.2009

ಸುತ್ತೋಲೆ

ವಿಷಯ :- ಲೋಕೋಪಯೋಗಿ ಇಲಾಖೆಗೆ ಸೇರಿದ ಜಮೀನುಗಳನ್ನು ಖಾಸಗಿಯವರಿಗೆ/ ಸಂಸ್ಥೆಯವರಿಗೆ ಲೀಸ್ ಆಧಾರದ ಮೇಲೆ ಮತ್ತು ಮಾರಾಟ ಮಾಡದಿರುವ ಬಗ್ಗೆ ಮಾರ್ಗಸೂಚಿಗಳು.

-----

ಲೋಕೋಪಯೋಗಿ ಇಲಾಖೆಗೆ ಸೇರಿದ ಜಮೀನುಗಳನ್ನು ಖಾಸಗಿಯವರಿಗೆ/ಸಂಸ್ಥೆಯವರಿಗೆ ಲೀಸ್ ಆಧಾರದ ಮೇಲೆ ನೀಡದಿರಲು ಮತ್ತು ಮಾರಾಟ ಮಾಡದಿರುವ ಬಗ್ಗೆ ಈ ಕೆಳಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

1. ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು ತಮ್ಮ ಕಾರ್ಯವ್ಯಾಪ್ತಿಯ ತಹಸೀಲ್ದಾರರನ್ನು ಸಂಪರ್ಕಿಸಿ, ಪ್ರತಿ ಗ್ರಾಮದ ಗೇಣಿ ಮತ್ತು ಪಹಣಿ ಪತ್ರಿಕೆ (ROR) ಗಳನ್ನು ಪರಿಶೀಲಿಸಿ, ಲೋಕೋಪಯೋಗಿ ಇಲಾಖೆಗೆ ಸೇರಿದ ಜಮೀನಿನ ಸರ್ವೆ ನಂಬರ್, ವಿಸ್ತೀರ್ಣ ಹಾಗೂ ಚಕ್‌ಬಂದಿ ನಮೂದಿಸಿದ ಪಟ್ಟಿಯನ್ನು ತಯಾರಿಸಿ ಇದಕ್ಕೆ ತಕ್ಕಂತೆ ನಕಾಶೆಯನ್ನು ತಯಾರಿಸತಕ್ಕದ್ದು.

2. ಲೋಕೋಪಯೋಗಿ ಇಲಾಖಾ ಸಂಹಿತೆ ವಾಲ್ಯೂಂ-1 ಕ್ಲಾಸ್-348ರ ಪ್ರಕಾರ ತಮ್ಮ ವ್ಯಾಪ್ತಿಯಲ್ಲಿ ಬರುವಂತಹ ಕಟ್ಟಡ ಹಾಗೂ ನಿವೇಶನಗಳನ್ನು ಸರ್ವೆ ಮಾಡಿ Property Registerನಲ್ಲಿ ಫಾರ್ಮ್ ನಂ.ಪಿಡಬ್ಲ್ಯೂಜಿ-82 ಮತ್ತು ಪಿಡಬ್ಲ್ಯೂಜಿ-83 ರಲ್ಲಿ ಎಲ್ಲಾ ವಿವರಗಳನ್ನು ನಮೂದಿಸಿ ಮೂರು ತಿಂಗಳೊಳಗೆ ಮುಖ್ಯ ಇಂಜಿನಿಯರ್ ರವರ ಮುಖಾಂತರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

3. ಸದರಿ ಜಾಗಗಳಲ್ಲಿ ಅತಿಕ್ರಮಣವಿದ್ದಲ್ಲಿ ಕಾರ್ಯಪಾಲಕ ಅಭಿಯಂತರರು ಪಬ್ಲಿಕ್ ಪ್ರಿಮಿಸಸ್ ಎವಿಕ್ಷನ್ ಆ್ಯಕ್ಟ್ (Public Premises Eviction Act)ಅಡಿಯಲ್ಲಿ ಅತಿಕ್ರಮಣವನ್ನು ತೆರವುಗೊಳಿಸಲು ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

4. ಎಲ್ಲಾ ನಿವೇಶನ ಹಾಗೂ ಕಟ್ಟಡಗಳಿಗೆ ಕಾಂಪೌಂಡ್ ಗೋಡೆಯನ್ನು ಕಟ್ಟುವ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳತಕ್ಕದ್ದು.

5. ಲೋಕೋಪಯೋಗಿ ಇಲಾಖೆಯಲ್ಲಿ ಖಾಲಿ ಇರುವ ಜಾಗ ಹಾಗೂ ಜಮೀನುಗಳ ಸದುಪಯೋಗಗೊಳಿಸುವ ಸಲುವಾಗಿ ಸೂಕ್ತ ಪ್ರಸ್ತಾವನೆಗಳಿಗೆ ನಕ್ಷೆ ಮತ್ತು ಅಂದಾಜನ್ನು ಸರ್ಕಾರಕ್ಕೆ ಸಲ್ಲಿಸುವುದು. ಜೊತೆಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದ (PPP) ಅಡಿಯಲ್ಲಿ ತೆಗೆದುಕೊಳ್ಳಬಹುದಾದಂತಹ ಪ್ರಸ್ತಾವನೆಗಳನ್ನು ಅಂದರೆ ರೆಸ್ಟ್ ರೂಂ, ಕನ್‌ವೆನ್ಷನ್ ಹಾಲ್ ಇತ್ಯಾದಿಗಳ ಬಗ್ಗೆಯೂ ಸಹ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

6. ತಮ್ಮ ವ್ಯಾಪ್ತಿಯಲ್ಲಿ ಬರುವಂತಹ ಖಾಲಿ ಜಮೀನುಗಳ ನಕ್ಷೆಗಳನ್ನು Ideck ಅಥವಾ KSSIDC ರವರ ಸಹಕಾರದೊಂದಿಗೆ ಇಂತಹ ಸಾರ್ವಜನಿಕ ಖಾಸಗಿ ಸಹಭಾಗಿತ್ವದ (PPP)

TA
ಎಲ್ಲಾ ಸ.ಕಾ.ಇಂ.ರವರಿಗೆ ಸುತ್ತೋಲೆ ಕಳುಹಿಸಿ ಸೂಚನೆಗಳನ್ನು ಪಾಲಿಸಲು ತಿಳಿಸುವುದು
21/03/09

7
3-4-09

4
4/09

ಪ್ರಸ್ತಾವನೆಗಳನ್ನು ತಯಾರಿಸುವುದು. ಸರ್ಕಾರದ ಅನುಮೋದನೆ ಪಡೆದ ನಂತರ Expression of Interest ಅನ್ನು ಕರೆಯತಕ್ಕದ್ದು.

7. ಇತರ ಇಲಾಖೆಗಳ ಕಛೇರಿಗಳು ಸರ್ಕಾರಿ ಕಟ್ಟಡಗಳ ಕೊರತೆಯಿಂದ ಖಾಸಗಿ ಕಟ್ಟಡಗಳಲ್ಲಿ ಬಾಡಿಗೆ ಆಧಾರದ ಮೇಲೆ ಇದ್ದಲ್ಲಿ ಅಂಥಹ ಸರ್ಕಾರಿ ಕಛೇರಿಗಳಿಗೆ ತಮ್ಮ ವ್ಯಾಪ್ತಿಯಲ್ಲಿ ಪ್ರಸ್ತುತ ಖಾಲಿ ಇರುವ ಜಾಗಗಳಲ್ಲಿ ಕಟ್ಟಡಗಳನ್ನು ಕಟ್ಟುವ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

8. ಲೀಸ್ ಅಥವಾ ಮಾರಾಟದ ಆಧಾರದ ಮೇಲೆ ಸರ್ಕಾರಿ ಜಮೀನುಗಳನ್ನು ಖಾಸಗಿಯವರಿಗೆ ಕೊಡುವ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದಕ್ಕಿಂತ ಮೊದಲು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಮೇಲಿನಂತೆ ಕ್ರಮ ತೆಗೆದುಕೊಳ್ಳುವುದು ಮತ್ತು ಇತರ ಸರ್ಕಾರಿ ಇಲಾಖೆಗಳಿಗೆ ಜಾಗವನ್ನು ಕೊಡುವ ಬಗ್ಗೆ ಆದ್ಯತೆ ನೀಡತಕ್ಕದ್ದು.

9. ಸರ್ಕಾರಿ ಜಮೀನುಗಳನ್ನು ಲೀಸ್ ಅಥವಾ ಮಾರಾಟದ ಆಧಾರದ ಮೇಲೆ ಕೊಡುವ ಬಗ್ಗೆ ಈ ಕೆಳಗಿನ ಕರ್ನಾಟಕ ಭೂ ಕಂದಾಯ ಕಾಯ್ದೆ, 1964 (Karnataka Land Revenue Act) ನಿಯಮ 108-I ನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

> "No Government land within the limits of a city or town granted to any individual or private institution. All such lands shall be reserved for public or government purposes to provide for public needs of a growing city or town."

10. ಲೋಕೋಪಯೋಗಿ ಇಲಾಖೆಗೆ ಸೇರಿದ ನಿವೇಶನ ಹಾಗೂ ಕಟ್ಟಡಗಳನ್ನು ಖಾಸಗಿಯವರಿಗೆ/ಸಂಸ್ಥೆಯವರಿಗೆ ಲೀಸ್ ನೀಡುವ ಮತ್ತು ಲೀಸ್ ಮುಂದುವರೆಸುವ ಪ್ರಸ್ತಾವನೆಗಳ ಬಗ್ಗೆ ಮೇಲ್ಕಂಡ ನಿಯಮದಡಿಯಲ್ಲಿ ಪರಿಶೀಲಿಸಿ ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರ ಹಂತದಲ್ಲಿಯೇ ತಿರಸ್ಕರಿಸತಕ್ಕದ್ದು.

ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸದೆ ಸದರಿ ನಿಯಮದ ಉಲ್ಲಂಘನೆ ಮಾಡಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತೀವ್ರವಾದ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ಸೂಚಿಸಲಾಗಿದೆ.

(ಕೆ. ರಘುಪತಿ ಉಲ್ಲಾಳ)
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ (ಕಟ್ಟಡಗಳು).

1. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು.
2. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಧಾರವಾಡ.
3. ಎಲ್ಲಾ ಅಧೀಕ್ಷಕ ಅಭಿಯಂತರರು/ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ.